# ವಿಶೇಷ ವೇತನ ಬಡ್ತಿ

ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 13 ಎಸ್. ಆರ್. ಎಸ್ 94
ಬೆಂಗಳೂರು ದಿನಾಂಕ : 16ನೇ ಡಿಸೆಂಬರ್ 1994

ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 20 ಎಸ್. ಆರ್. ಎಸ್. 86 ದಿನಾಂಕ 21–07–1986 ಹಾಗೂ ಸದರಿ ವಿಷಯಕ್ಕೆ ಸಂಬಂಧಿಸಿದ ಇದುವರೆಗಿನ ಇತರೆ ಎಲ್ಲಾ ಆದೇಶಗಳನ್ನು ರದ್ದುಗೊಳಿಸಿ ಕೆಳಗಿನಂತೆ ಆದೇಶಗಳನ್ನು ಹೊರಡಿಸಲಾಗಿದೆ.

1) ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳು ಹಾಗೂ ಇಂಡಿಯನ್ ಓಲಂಪಿಕ್ ಅಸೋಸಿಯೇಷನ್‌ಗಳಿಂದ ನಡೆಸಲ್ಪಡುವ ರಾಷ್ಟ್ರೀಯ ಅಂತರ್‌ರಾಷ್ಟ್ರೀಯ ಮಹತ್ವದ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಆಯ್ಕೆಯಾದ ರಾಜ್ಯ ಸರ್ಕಾರಿ ನೌಕರರಿಗೆ ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು. ಇಂತಹ ಮಾನ್ಯತೆ ಪಡೆದ ಕ್ರೀಡಾ ಪೆಡರೇಷನ್‌ಗಳ ಪಟ್ಟಿಯನ್ನು ಈ ಆದೇಶಕ್ಕೆ ಲಗತ್ತಿಸಲಾದ ಅನುಬಂಧದಲ್ಲಿ ಉಲ್ಲೇಖಿಸಲಾಗಿದೆ. ಸದರಿ ಕ್ರೀಡಾ ಕೂಟಗಳಲ್ಲಿ ಕ್ರೀಡಾಪಟುವಾಗಿ ವಾಸ್ತವಿಕವಾಗಿ ಭಾಗವಹಿಸುವ ದಿನಗಳಿಗೆ ಹಾಗೂ ಇಂತಹ ಕ್ರೀಡಾ ಕೂಟಗಳಿಗೆ ಹೋಗಿ ಬರಲು ತಗಲುವ ಅವಧಿಗೆ ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡತಕ್ಕದ್ದು. ಅಲ್ಲದೆ, ಮೇಲೆ ಉಲ್ಲೇಖಿಸಲಾದ ಕ್ರೀಡಾ ಕೂಟಗಳಿಗೆ ಸಂಬಂಧಿಸಿದಂತೆ ಪೂರ್ವಾನ್ವಯ ತರಬೇತಿ ಶಿಬಿರ ನಡೆಸಿದಲ್ಲಿ ಹಾಗೂ ಅಂತಹ ಶಿಬಿರಗಳಿಗೆ ಸರ್ಕಾರಿ ನೌಕರನು ಭಾಗವಹಿಸಬೇಕಾಗಿ ಬಂದಲ್ಲಿ ಆ ಅವಧಿಗೂ ಸಹ ವಿಶೇಷ ಸಾಂಧರ್ಭಿಕ ರಜೆಯನ್ನು ಮಂಜೂರು ಮಾಡಬಹುದು.

2) ಯೂತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಅವರಿಂದ ಸಂಘಟಿಸಲ್ಪಡುವ ಪರ್ವತಾರೋಹಣ ಯಾತ್ರೆಗಳಿಗೆ ಹಾಗೂ ಇಂಡಿಯನ್ ಮೌಂಟನೀಯರಿಂಗ್ ಪೆಡೆರೇಷನ್‌ನಿಂದ ಅನುಮೋದಿಸಲ್ಪಟ್ಟ ಪರ್ವತಾರೋಹಣ ಯಾತ್ರೆಗಳಲ್ಲಿ ಭಾಗವಹಿಸಲು ಆಯ್ಕೆಯಾದ ರಾಜ್ಯ ಸರ್ಕಾರಿ ನೌಕರರಿಗೆ ಒಂದು ಕ್ಯಾಲೆಂಡರ್ ವರ್ಷದಲ್ಲಿ 30 ದಿನಗಳ ಕಾಲಾವಧಿ ಮೀರದಂತೆ ವಿಶೇಷ ಸಾಂದರ್ಭಿಕ ರಜೆಯ ಸೌಲಭ್ಯವನ್ನು ಮಂಜೂರು ಮಾಡಬಹುದಾಗಿದೆ. ಆದರೆ ಪರ್ವತಾರೋಹಣ ಯಾತ್ರೆಗಳಿಗೆ ಮಂಜೂರು ಮಾಡಲ್ಪಡುವ ವಿಶೇಷ ಸಾಂದರ್ಭಿಕ ರಜೆಯ ಸೌಲಭ್ಯವನ್ನು ಸರ್ಕಾರಿ ನೌಕರನ ಇಡೀ ಸೇವಾವಧಿಯಲ್ಲಿ ಮೂರು ಬಾರಿಗೆ ಮಾತ್ರ ನೀಡುವುದಕ್ಕೆ ಸೀಮಿತಗೊಳಿಸಲಾಗಿದೆ. ಈ ಮೂರು ಬಾರಿಯ ಸೌಲಭ್ಯಗಳನ್ನು ಪಡೆದ ತರುವಾಯ ಸಹ ಸರ್ಕಾರಿ ನೌಕರನು ಪರ್ವತಾರೋಹಣ ಯಾತ್ರೆಗೆ ತೆರಳಲು ಇಚ್ಛಿಸಿದ ಸಂದರ್ಭಗಳಲ್ಲಿ ವಿಶೇಷ ಸಾಂದರ್ಬಿಕ ರಜೆ ಮಂಜೂರು ಮಾಡಲು ಹಕ್ಕುಳ್ಳ ಪ್ರಾಧಿಕಾರವು ತನ್ನ ವಿವೇಚನೆ ಮೇರೆಗೆ ಅಂಥ ಸರ್ಕಾರಿ ನೌಕರನಿಗೆ ಅವರ ಹಕ್ಕಿನಲ್ಲಿರುವ ರಜೆಯನ್ನು ಮಂಜೂರು ಮಾಡುವ ಷರತ್ತಿನೊಂದಿಗೆ ಅನುಮತಿಸಬಹುದು.

3) ಪರ್ವತಾರೋಹಣ: ಟ್ರಕಿಂಗ್ ಯಾತ್ರೆಗಳಲ್ಲಿ ಭಾಗವಹಿಸಲು ಈಗಾಗಲೇ ಮೂರು ಬಾರಿ ವಿಶೇಷ ಸಾಂದರ್ಭಿಕ ರಜೆ ಸೌಲಭ್ಯವನ್ನು ಪಡೆದಿರುವ ಸರ್ಕಾರಿ ನೌಕರರು ಇನ್ನು ಮುಂದಿನ ಪರ್ವತಾರೋಹಣ ಟ್ರಕ್ಕಿಂಗ್ ಯಾತ್ರೆಗಳಲ್ಲಿ ಭಾಗವಹಿಸುವುದಕ್ಕಾಗಿ ವಿಶೇಷ ಸಾಂದರ್ಭಿಕ ರಜೆ ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ.

4) ಪಟಿಯಾಲದಲ್ಲಿರುವ ರಾಷ್ಟ್ರೀಯ ಕ್ರೀಡಾ ಸಂಸ್ಥೆಯಲ್ಲಿ ಅಥವಾ ರಾಜಕುಮಾರಿ ಅಮೃತ್ ಕೌರ್ ಕೋಚಿಂಗ್ ಯೋಜನೆ ಅಥವಾ ತತ್ಸಮಾನವಾದ ಅಖಿಲ ಭಾರತೀಯ ಕೋಚಿಂಗ್ ಅಥವಾ ತರಬೇತಿ ಯೋಜನೆಗಳ ಮೇರೆಗೆ ನಡೆಸಲ್ಪಡುವ ಕೋಚಿಂಗ್ ಅಥವಾ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಒಂದು ಕ್ಯಾಲೆಂಡರ್ ವರ್ಷದಲ್ಲಿ ಮಂಜೂರು ಮಾಡಲ್ಪಡುವ 30 ದಿನಗಳ ವಿಶೇಷ ಸಾಂದರ್ಭಿಕ ರಜೆ ಅವಧಿಯು ಸರ್ಕಾರಿ ನೌಕರರು ರಾಷ್ಟ್ರೀಯ ಮತ್ತು

ಅಂತರ ರಾಷ್ಟ್ರೀಯ ಮಹತ್ವದ ಕ್ರೀಡಾಕೂಟಗಳಿಗೆ ಸಂಬಂಧಿಸಿದಂತೆ ಆಯ್ಕೆ ಪೂರ್ವ ಪರೀಕ್ಷಾ ಕೂಟ/ಕ್ಯಾಂಪ್‌ಗಳಲ್ಲಿ ಭಾಗವಹಿಸುವ ಅವಧಿಯನ್ನು ಸಹ ಒಳಗೊಂಡಿರುತ್ತದೆ.

5) ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ಮಹತ್ವದ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ತಂಡಗಳ ಮ್ಯಾನೇಜರ್, ಕೋಚ್ ಅಥವಾ ಅಂಪೈರ್ ಆಗಿ ಆಯ್ಕೆಗೊಳ್ಳುವ ಸರ್ಕಾರಿ ನೌಕರರಿಗೆ ಒಂದು ಕ್ಯಾಲೆಂಡರ್ ವರ್ಷದಲ್ಲಿ 30 ದಿನಗಳಿಗೂ ಮೀರದಂತೆ ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡಬಹುದು. ಆದರೆ ಮ್ಯಾನೇಜರ್, ಕೋಚ್ ಮತ್ತು ಅಂಪೈರ್‌ಗಳು ಪ್ರಯಾಣ ಭತ್ಯೆ ಅಥವಾ ದಿನಭತ್ಯೆ ಪಡೆಯಲು ಅರ್ಹರಿರುವುದಿಲ್ಲ. ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಹತ್ವವುಳ್ಳ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಯಾವುದೇ ವ್ಯಕ್ತಿ ಅವನು ಮ್ಯಾನೇಜರ್, ಕೋಚ್, ಅಂಪೈರ್, ಆಟಗಾರ, ತರಬೇತಿದಾರ, ಇತ್ಯಾದಿಯವರುಗಳಿಗೆ ಕ್ಯಾಲೆಂಡರ್ ವರ್ಷದಲ್ಲಿ ಮಂಜೂರು ಮಾಡಲ್ಪಡುವ ವಿಶೇಷ ಸಾಂದರ್ಭಿಕ ರಜೆಗಳು 30 ದಿನಗಳಿಗೆ ಮಾತ್ರ ಸೀಮಿತವಾಗಿರತಕ್ಕದ್ದು.

6) ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ಮಹತ್ವದ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಆಯ್ಕೆಯಾದ ಸರ್ಕಾರಿ ನೌಕರರು ಭಾರತ ದೇಶದ ಒಳಗಡೆ ಪ್ರಯಾಣಿಸಿದಾಗ ಅಂತಹ ನೌಕರರು ಪ್ರಥಮ ದರ್ಜೆ ರೈಲ್ವೆ ದರ ಪಡೆಯಲು ಅರ್ಹರಿರುತ್ತಾರೆ. ಅಂತರಾಷ್ಟ್ರೀಯ ಮಹತ್ವವುಳ್ಳ ಕ್ರೀಡಾಕೂಟಗಳು ದೇಶದ ಹೊರಗಡೆ ನಡೆದಾಗ ಅವರು ಮಿತವ್ಯಯ ದರ್ಜೆಯ ವಿಮಾನ ಪ್ರಯಾಣ ಮಾಡಲು ಅರ್ಹರಾಗಿರುತ್ತಾರೆ.

7) ರಾಷ್ಟ್ರೀಯ ಮಹತ್ವದ ಕ್ರೀಡಾಕೂಟಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಸರ್ಕಾರಿ ನೌಕರರಿಗೆ ಒಂದು ವಿಶೇಷ ವೇತನ ಬಡ್ತಿ ಹಾಗೂ ಅಂತರ ರಾಷ್ಟ್ರೀಯ ಮಹತ್ವದ ಕ್ರೀಡಾಕೂಟಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಸರ್ಕಾರಿ ನೌಕರರಿಗೆ ಎರಡು ವಿಶೇಷ ವೇತನ ಬಡ್ತಿಯನ್ನು ನೀಡಬಹುದಾಗಿದೆ. ರನ್ನರ್ಸ್ ಅಪ್ ಆದ ಕ್ರೀಡಾಪಟುಗಳು ಈ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ. ಹೀಗೆ ಮಂಜೂರು ಮಾಡಲಾದ ವಿಶೇಷ ವೇತನ ಬಡ್ತಿಗಳು ಒಬ್ಬ ವ್ಯಕ್ತಿಗೆ ಅವನ/ಅವಳ ಪೂರ್ಣ ಸೇವಾವಧಿಯಲ್ಲಿ ಮೂರನ್ನು ಮೀರಿರಬಾರದು, ಹೀಗೆ ಮಂಜೂರು ಮಾಡಲಾದ ವಿಶೇಷ ವೇತನ ಬಡ್ತಿಯನ್ನು ಸಣ್ಣ ಕುಟುಂಬದ ಧ್ಯೇಯಗಳನ್ನು ಅನುಸರಿಸುವವರಿಗೆ ನೀಡಲಾಗುವ ಪ್ರೋತ್ಸಾಹಕ ವೇತನ ಬಡ್ತಿಯಂತೆಯೆ 'ವೈಯಕ್ತಿಕ ಭತ್ಯೆ' ಎಂದು ಪರಿಗಣಿಸತಕ್ಕದ್ದು 'ವೈಯಕ್ತಿಕ ಭತ್ಯೆ'ಯ ರೂಪದಲ್ಲಿ ಮಂಜೂರು ಮಾಡುವ ಇಂತಹ ವಿಶೇಷ ವೇತನ ಬಡ್ತಿಯ ದರವು ಈ ಸೌಲಭ್ಯವನ್ನು ಮಂಜೂರು ಮಾಡುವ ಸಮಯದಲ್ಲಿನ ಮುಂದಿನ ವಾರ್ಷಿಕ ಬಡ್ತಿಯ ದರಕ್ಕೆ ಸಮನಾಗಿರಬೇಕು. ಹಾಗೂ ಅದು ಪೂರ್ಣ ಸೇವಾವಧಿಯಲ್ಲಿ ಅದೇ ದರದಲ್ಲಿರಬೇಕು. ಸದರಿ ವೈಯಕ್ತಿಕ ಭತ್ಯೆಯು ಹೊಂದಿದ ಉನ್ನತ ಹುದ್ದೆಯಲ್ಲಿನ ಅಥವಾ ಅದೇ ಹುದ್ದೆಯಲ್ಲಿನ ವೇತನಗಳ ಹೆಚ್ಚಳದಲ್ಲಿ ವಿಲೀನಗೊಳ್ಳತಕ್ಕದ್ದಲ್ಲ. ಕಾಲಿಕ ವೇತನ ಶ್ರೇಣಿಯಲ್ಲಿ ಗರಿಷ್ಠ ಹಂತ ತಲುಪದ ಸರ್ಕಾರಿ ನೌಕರರ ಪ್ರಕರಣಗಳಲ್ಲಿ ವೈಯಕ್ತಿಕ ಭತ್ಯೆಯ ದರವು ಹಿಂದಿನ ವೇತನ ಬಡ್ತಿಯ ದರಕ್ಕೆ ಸಮನಾಗಿರಬೇಕು.

8) ಮೇಲೆ ಉಲ್ಲೇಖಿಸಿದ ವೈಯಕ್ತಿಕ ಭತ್ಯೆಯ ರೂಪದಲ್ಲಿ ವಿಶೇಷ ಬಡ್ತಿಯನ್ನು ಯಾವ ತಿಂಗಳಲ್ಲಿ ಕ್ರೀಡಾಕೂಟವು ಪೂರ್ಣಗೊಳ್ಳುತ್ತದೆಯೋ ಅದರ ಮುಂದಿನ ತಿಂಗಳ ಮೊದಲನೆ ದಿನಾಂಕದಿಂದ ನೀಡಬಹುದು. ಸಮಗ್ರ ಸ್ಪರ್ಧೆಗಳು ಮುಕ್ತಾಯಗೊಂಡ ದಿನದಿಂದ ಸರ್ಕಾರಿ ನೌಕರರಿಗೆ ಲಭ್ಯವಿರುವ ವೇತನ ಶ್ರೇಣಿಯನ್ನು ಗಮನದಲ್ಲಿಟ್ಟುಕೊಂಡು ಈ ವಿಶೇಷ ವೇತನ ಬಡ್ತಿಯನ್ನು ಲೆಕ್ಕ ಹಾಕತಕ್ಕದ್ದು. ಸರ್ಕಾರಿ ಆದೇಶ ಸಂ:ಎಫ್‌ಡಿ/20/ಎಸ್‌ಆರ್‌ಎಸ್/86 ದಿ:21-07-1986 ರಡಿಯಲ್ಲಿ ಈಗಾಗಲೇ ಮೂರು ವಿಶೇಷ ವೇತನ ಬಡ್ತಿಗಳನ್ನು ಪಡೆದ ಸರ್ಕಾರಿ ನೌಕರರು ಈ ಯೋಜನೆಯಡಿಯಲ್ಲಿ ಮುಂದಿನ ವೇತನ ಬಡ್ತಿಗಳನ್ನು ಪಡೆಯಲು ಅರ್ಹರಿರುವುದಿಲ್ಲ.

9) ಕ್ರೀಡಾಕೂಟಗಳು ಕೊನೆಗೊಂಡ ಮೂರು ತಿಂಗಳ ಒಳಗಾಗಿ ಸರ್ಕಾರಿ ನೌಕರನು ವಿಶೇಷ ವೇತನ ಬಡ್ತಿ ಮಂಜೂರಾತಿಗಾಗಿ ಅರ್ಜಿ ಸಲ್ಲಿಸತಕ್ಕದ್ದು ಅನಂತರ ಸಲ್ಲಿಸಿದ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ.

10) ಈ ಆದೇಶದ ಅಡಿಯಲ್ಲಿ ಮಂಜೂರು ಮಾಡಲ್ಪಡುವ ವೈಯಕ್ತಿಕ ಭತ್ಯೆಯನ್ನು ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ಮಹತ್ವದ ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳೆರಡಕ್ಕೂ ಕೂಡ ಅನ್ವಯಿಸತಕ್ಕದ್ದು.

11) ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ಮಹತ್ವದ ಕ್ರೀಡಾಕೂಟಗಳಲ್ಲಿ ಮ್ಯಾನೇಜರುಗಳು, ಕೋಚ್‌ಗಳು, ಮ್ಯಾಸಿಯರುಗಳು ಮತ್ತು ವೈದ್ಯರುಗಳು ಆಗಿ ಭಾಗವಹಿಸುವ ಸರ್ಕಾರಿ ನೌಕರರುಗಳಿಗೆ ಕೆಲಸದ ಅಗತ್ಯತೆಯನ್ನು ಪರಿಗಣಿಸಿ ವಿಶೇಷ ಸಾಂಧರ್ಬಿಕ ರಜೆಯನ್ನು ಮಂಜೂರು ಮಾಡಬಹುದು. ಆದರೆ ಇವರುಗಳಿಗೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನು ಮಂಜೂರು ಮಾಡತಕ್ಕದ್ದಲ್ಲ ಹಾಗೂ ಇವರು ವಿಶೇಷ ವೇತನ ಬಡ್ತಿಯನ್ನು ಪಡೆಯಲು ಅರ್ಹರಾಗುವುದಿಲ್ಲ.

12) ಟೆನ್ನಿಸ್‌ನಂತಹ ಕ್ರೀಡಾ ತಂಡಗಳಲ್ಲಿ ಅಂತಿಮ ಸ್ಪರ್ಧೇಯಲ್ಲಿ ಆಟಗಾರರಾಗಿ ಭಾಗವಹಿಸದ ಮತ್ತು ಪ್ರಥಮ ಸ್ಥಾನವನ್ನು ಗಳಿಸಿದ ಸ್ಥಾನ- ಪ್ಲೇಯಂಗ್ ಕ್ಯಾಪ್ಟನ ಹಾಗೂ ಇತರೆ ಕ್ರೀಡಾ ಪಟುಗಳು ವೈಯಕ್ತಿಕ ಭತ್ಯೆ ರೂಪದಲ್ಲಿನ ವಿಶೇಷ ವೇತನ ಭತ್ಯೆಯನ್ನು ಪಡೆಯಲು ಅರ್ಹರಾಗುವುದಿಲ್ಲ. ಅವರು ಕೇವಲ ವಿಶೇಷ ಸಾಂದರ್ಭಿಕ ರಜೆಯನ್ನು ಮಾತ್ರ ಪಡೆಯಲು ಅರ್ಹರಾಗಿರುತ್ತಾರೆ.

13) ಈ ಆದೇಶದ ಅಡಿಯಲ್ಲಿ ಉಲ್ಲೇಖಿಸಲಾದ ವಿಶೇಷ ವೇತನ ಬಡ್ತಿಯ ಸೌಲಭ್ಯವು ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಹತ್ವದ ನಾಟಕ. ಸಂಗೀತ, ನೃತ್ಯ. ಕಲೆ ವಾದ್ಯಗೋಷ್ಠಿ ಇತ್ಯಾದಿ ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ. ಮತ್ತು ತೃತೀಯ ಸ್ಥಾನ ಪಡೆದ ಸರ್ಕಾರಿ ನೌಕರರಿಗೆ ಅನ್ವಯಿಸುವುದಿಲ್ಲ.

14) ಸದರಿ ಆದೇಶ ಅನುಬಂಧದಲ್ಲಿನ ಪಟ್ಟಿಯಲ್ಲಿರುವ ಫೆಡರೇಷನ್‌ಗಳು ನಡೆಸುವ ರಾಷ್ಟ್ರೀಯ ಮಹತ್ವದ ಕ್ರೀಡಾಕೂಟಗಳಿಗೆ ಮಾತ್ರ ಈ ಆದೇಶದಲ್ಲಿನ ಸೌಲಭ್ಯವು ದೊರೆಯುತ್ತದೆ.

15) ಯಾವುದೇ ನಿರ್ದಿಷ್ಟ ಸೇವೆ ಅಥವಾ ವೃತ್ತಿ ಹಾಗೂ ವಿಶಿಷ್ಠ ಗುಂಪಿನ ವ್ಯಕ್ತಿಗಳ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಕ್ರೀಡಾಕೂಟಗಳು ಹಾಗೂ ವೆಟರನ್ಸ್ ಕೂಟಗಳಿಗೆ ಈ ಆದೇಶದಲ್ಲಿನ ಸೌಲಭ್ಯಗಳು ಅನ್ವಯಿಸುವುದಿಲ್ಲ.

16) ಅನುಬಂಧದಲ್ಲಿ ಉಲ್ಲೇಖಿಸಲಾದ ಮಾನ್ಯತೆ ಪಡೆದ ರಾಷ್ಟ್ರೀಯ ಪೆಡರೇಷನ್‌ಗಳಿಂದ ಸೂಚಿಸಲ್ಪಟ್ಟ ಹಾಗೂ ಸರ್ಕಾರದಿಂದ ಪೂರ್ವಾನುಮತಿ ಪಡೆದು ಭಾಗವಹಿಸುವ ಅಭ್ಯರ್ಥಿಗಳಿಗೆ ಸಂಬಂಧಿಸಿದ ಅಂತರ್‌ರಾಷ್ಟ್ರಿಯ ಕ್ರೀಡಾ ಸಂಸ್ಥೆಗಳಿಂದ ನಡೆಸಲ್ಪಡುವ ಕ್ರೀಡಾಕೂಟಗಳಿಗೆ ಸಹ ಈ ಆದೇಶದ ಸೌಲಭ್ಯಗಳು ಅನ್ವಯಿಸುತ್ತದೆ.

17) ಸರ್ಕಾರಿ ಸೇವೆಯ ಅಗತ್ಯತೆ ಅನುಸಾರವಾಗಿ ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡುವುದು ಅಥವಾ ತಿರಸ್ಕರಿಸುವುದು ರಜೆ ಮಂಜೂರು ಮಾಡುವ ಅಧಿಕಾರವುಳ್ಳ ಸಕ್ಷಮ

ಪ್ರಾಧಿಕಾರಿಯ ವಿವೇಚನೆಗೆ ಸೇರಿದ್ದು. ಈ ವಿಶೇಷ ಸಾಂದರ್ಭಿಕ ರಜೆಯನ್ನು ನೌಕರರು ಹಕ್ಕೆಂಬಂತೆ ಸಾಧಿಸಲಾಗದು.

18) ಸದರಿ ಆದೇಶದಲ್ಲಿನಂತೆ ವಿಶೇಷ ವೇತನ ಬಡ್ತಿಯ ರೂಪದಲ್ಲಿ ಮಂಜೂರು ಮಾಡುವ ವೈಯಕ್ತಿಕ ಭತ್ಯೆಗೆ ಸಂಬಂಧಿಸಿದಂತೆ ಪ್ರಸ್ತಾವನೆಗಳನ್ನು. ಕ್ರೀಡೆ ಮತ್ತು ಯುವಜನ ಸೇವಾ ಇಲಾಖೆಯ ನಿರ್ದೇಶಕರ ಶಿಫಾರಸ್ಸಿನೊಂದಿಗೆ ಆರ್ಥಿಕ ಇಲಾಖೆಗೆ ಕಳುಹಿಸತಕ್ಕದ್ದು ಹಾಗೂ ಆರ್ಥಿಕ ಇಲಾಖೆಯ ಒಪ್ಪಿಗೆಯನ್ನು ಪಡೆದ ನಂತರವೇ ಸದರಿ ವೈಯಕ್ತಿಕ ಭತ್ಯೆಯನ್ನು ಮಂಜೂರು ಮಾಡತಕ್ಕದ್ದು.

19) ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಹತ್ವದ ಕ್ರೀಡಾಕೂಟಗಳಲ್ಲಿ ಭಾಗವಹಿಸುವುದಕ್ಕೆ ಮೊದಲು ಸರ್ಕಾರಿ ನೌಕರನು ಸಂಬಂಧಪಟ್ಟ ಆಡಳಿತ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರ ಪೂರ್ವಾನುಮತಿ ಪಡೆಯತಕ್ಕದ್ದು.

20) ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಹತ್ವದ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ನೌಕರರಿಗೆ ವಿಶೇಷ ಸಾಂದರ್ಬಿಕ ರಜೆಯನ್ನು ಮಂಜೂರು ಮಾಡುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಯ ಅನುಬಂಧ-ಬಿ ಯಲ್ಲಿನ ಉಪಬಂಧಗಳು ಮೇಲೆ ಹೇಳಿರುವಷ್ಟರ ಮಟ್ಟಿಗೆ ಮಾರ್ಪಾಡಾಗತಕ್ಕದ್ದು.


ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:

**ಕ್ರೀಡಾ ಕಲ್ಯಾಣ/ಪಂದ್ಯಾವಳಿ ಶಾಖೆ**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,

ಕೇಂದ್ರ ಕಚೇರಿ, ರಾಜ್ಯ ಯುವ ಕೇಂದ್ರ,

ಬೆಂಗಳೂರು

www.karnatakayouthportal.in ಸಂಪರ್ಕಿಸುವುದು.

ಅಂಗೀಕೃತ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳ ವಿಳಾಸಗಳು

| | | | |
|---|---|---|---|
| 1. | ಅಮೆಚೂರ್ ಕಬಡ್ಡಿ ಫೆಡರೇಷನ್ ಆಫ್ ಇಂಡಿಯಾ, 119/ಎ, ಹರೀಶ್ ಮುಖರ್ಜಿ ರಸ್ತೆ, ಕಲ್ಕತ್ತ – 700026 | 2 | ಬಾಲ್ ಬ್ಯಾಡ್ಮಿಂಟನ್ ಫೆಡರೇಷನ್ ಆಫ್ ಇಂಡಿಯಾ, 23, ಥಂತಾಯ್ ಪೆರಿಯಾರ್ ನಗರ, ಎಲ್‌ಪಿಲ್ಲಾಯಿ ಚಾವಡಿ, ಪಾಂಡಿಚೇರಿ–605005 |
| 3 | ಬ್ರಿಡ್ಜ್ ಫೆಡರೇಷನ್ ಆಫ್ ಇಂಡಿಯಾ, 125, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003 | 4 | ಫೆಡರೇಷನ್ ಆಫ್ ಮೋಟರ್ ಸ್ಪೋರ್ಟ್ಸ್ ಕ್ಲಬ್ ಆಫ್ ಇಂಡಿಯಾ, ಮ್ಯಾಕ್‌ಡೊವೆಲ್ ಹೌಸ್ 2ನೇ ಲೈನ್ ಬೀಚ್, ಪಿ.ಬಿ.ನಂ. 1256, ಮದ್ರಾಸ್–600001 |
| 5 | ಇಂಡಿಯನ್ ಗಾಲ್ಫ್ ಯೂನಿಯನ್, ಟಾಟಾ ಸೆಂಟರ್, 3ನೇ ಫ್ಲೋರ್, 43, ಚೌರಂಗಿ ರಸ್ತೆ, ಕಲ್ಕತ್ತ–700071 | 6 | ಜೂಡೋ ಫೆಡರೇಷನ್ ಆಫ್ ಇಂಡಿಯಾ, ಸೋನಾವಾಲ್ ಬಿಲ್ಡಿಂಗ್, 2ನೇ ಫ್ಲೋರ್, 65, ಮುಂಬೈ–400023 |
| 7 | ಆರ್ಚೆರಿ ಅಸೋಸಿಯೇಷನ್ ಆಫ್ ಇಂಡಿಯಾ, ಅಂಬಾ ಪೇಟ, ಅಮರಾವತಿ, ಮಹಾರಾಷ್ಟ್ರ | 8 | ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಆಫ್ ಇಂಡಿಯಾ, ಎ/66, ದೀರಾವಾಲಾ ನಗರ, ದೆಹಲಿ–110031 |
| 9 | ಸೈಕ್ಲಿಂಗ್ ಫೆಡರೇಷನ್ ಆಫ್ ಇಂಡಿಯಾ, ಮುನಾ ವೆಲೋಡ್ರಾಮ,, ಇಂದಿರಾಗಾಂಧಿ ಸ್ಟೇಡಿಯಂ ಕಾಂಪ್ಲೆಕ್ಸ್, ನವದೆಹಲಿ | 10 | ಜಿಮ್ನಾಸ್ಟಿಕ್ ಫೆಡರೇಷನ್ ಆಫ್ ಇಂಡಿಯಾ, ನಂ.68, ಸೆಕ್ಟರ್ 10/ಎ ಚಂಡೀಗಡ–160010 |
| 11 | ಇಂಡಿಯನ್ ಪೋಲೋ ಅಸೋಸಿಯೇಷನ್, ಕೇರಾಫ್ ಪ್ರಿಸಿಡೆಂಟ್ಸ್ ಬಾಡಿ ಗಾರ್ಡ್, ಗೇಟ್ ನಂ: 24, ರಾಷ್ಟ್ರಪತಿ ಭವನ, ನವದೆಹಲಿ | 12 | ಖೋಖೋ ಫೆಡರೇಷನ್ ಆಫ್ ಇಂಡಿಯಾ, 14/1ಎ, ಪೊಟ್ಟೇರಿ ರಸ್ತೆ, ಕಲ್ಕತ್ತ–700015 |
| 13 | ಸಾಫ್ಟ್‌ಬಾಲ್ ಅಸೋಸಿಯೇಷನ್ ಆಫ್ ಇಂಡಿಯಾ ರಾವಟನ್ ಕಾ ಬಾಸ್, ಜೋಧ್‌ಪುರ–420001 | 14 | ಟೆನ್ನಿಕಾಯಿಟ್ ಫೆಡರೇಷನ್ ಆಫ್ ಇಂಡಿಯಾ, ರೂಮ್ ನಂ. 159, ಗ್ರೌಂಡ್‌ಫ್ಲೋರ್, 3ನೇ ಕ್ರಾಸ್, 2ನೇ ಮೇಯಿನ್, ದತ್ತಾತ್ರೇಯ ಎಕ್ಸ್‌ಟೆನ್ಷನ್, ಬೆಂಗಳೂರು–560 019 |
| 15 | ವಿಮೆನ್ಸ್ ಕ್ರಿಕೆಟ್ ಅಸೋಸಿಯೇಷನ್ ಆಫ್ ಇಂಡಿಯಾ, 174, ರಮೇಶ್‌ದತ್ತ, ಸ್ಟ್ರೀಟ್, ಕಲ್ಕತ್ತ–700006 | 16 | ಇಂಡಿಯನ್ ಒಲಂಪಿಕ್ ಅಸೋಸಿಯೇಷನ್, ಜವಹರಲಾಲ್ ನೆಹರು ಸ್ಟೇಡಿಯಂ, ನವದೆಹಲಿ |
| 17 | ಆಲ್ ಇಂಡಿಯಾ ಸ್ಪೋರ್ಟ್ಸ್ ಕೌನ್ಸಿಲ್ ಆಫ್ ಡೆಫ್, 8, ನಾರ್ಥ್ ಎಂಡ್ ಕಾಂಪ್ಲೆಕ್ಸ್ ಶ್ರೀ ಕಾಮಕೃಷ್ಣ ಆಶ್ರಮ ಮಾರ್ಗ, ನವದೆಹಲಿ–110001 | 18 | ಆಲ್ ಇಂಡಿಯಾ ಚೆಸ್ ಫೆಡರೇಷನ್, 3: 37, ನೂನಾ, ಮ್ಯಾನ್‌ಜಿಲ್, ಪೋಸ್ಟ್ ನಲ್ಲಮ್, ಕ್ಯಾಲಿಕಟ್–673027 |
| 19 | ಸ್ಕ್ವಾಶ್ ರಾಕೆಟ್ ಫೆಡರೇಷನ್ ಆಫ್ ಇಂಡಿಯಾ, ಕೇರಾಫ್ ದಿ ಕಲ್ಕತ್ತ ರಾಕೆಟ್ ಕ್ಲಬ್, ನಿಯರ್ ಸೇಂಟ್ ಪಾಲ್ಸ್ ಕಾಥಡ್ರಲ್, ಚೌರಂಗಿ, ಕಲ್ಕತ್ತ–700071 | 20 | ಟೇಬಲ್ ಟೆನ್ನಿಸ್ ಫೆಡರೇಷನ್ ಆಫ್ ಇಂಡಿಯಾ, ರೂಂ ನಂ: 1144–ಎ, 2ನೇ ಫ್ಲೋರ್ ಗೇಟ್ ನಂ 28, ಜವಹರಲಾಲ್ ನೆಹರು ಸ್ಟೇಡಿಯಂ, ನವದೆಹಲಿ–110003 |
| 21 | ವಿಮೆನ್ಸ್ ಫುಟ್‌ಬಾಲ್ ಫೆಡರೇಷನ್ ಆಫ್ ಇಂಡಿಯಾ, ಬಿಹೈಂಡ್ ಹೆಡ್ ಪೋಸ್ಟ್ ಆಫೀಸ್, ಮೇನ್ ಬಜಾರ, ಗೋರಕ್‌ಪುರ, ಉತ್ತರಪ್ರದೇಶ | 22 | ಥ್ರೋಬಾಲ್ ಫೆಡರೇಷನ್ ಆಫ್ ಇಂಡಿಯಾ, 29, ರಾಜಾರಾಂ ಮೋಹನ್‌ರಾಯ್ ರಸ್ತೆ, ಬೆಂಗಳೂರು–560 027 |
| 23 | ಇಂಡಿಯನ್ ವಿಮೆನ್ಸ್ ಹಾಕಿ ಫೆಡರೇಷನ್, 23, ಸೆಕ್ಟರ್ 7, ಚಂಡೀಗಡ | 24 | ಆಲ್ ಇಂಡಿಯಾ ಫುಟ್‌ಬಾಲ್ ಫೆಡರೇಷನ್ ಗ್ರೀನ್ ಲಾನ್ಸ್, ತಲಾಪ್, ಕಣ್ಣಾನೂರು, |

| | | | |
|---|---|---|---|
| | | | ಕೇರಳ–670002 |
| 25 | ನ್ಯಾಷನಲ್ ರೈಫಲ್ ಅಸೋಸಿಯೇಷನ್, ರೂಂ ನಂ: 46, 1ನೇ ಫ್ಲೋರ್, ರಘುಶ್ರೀ ಕಾಂಪ್ಲೆಕ್ಸ್, ಅಜಮೇರಿ ಗೇಟ್, ದೆಹಲಿ–110006 | 26 | ಸ್ವಿಮ್ಮಿಂಗ್ ಫೆಡರೇಷನ್ ಆಫ್ ಇಂಡಿಯಾ, 27, ಪರಾಗ್‌ಕುಂಜ್ ಸೊಸೈಟಿ–1, ಸೆಟಲೈಟ್ ರಸ್ತೆ, ಅಹಮದಾಬಾದ್, ಗುಜರಾತ್–380015 |
| 27 | ವಾಲಿಬಾಲ್ ಫೆಡರೇಷನ್ ಆಫ್ ಇಂಡಿಯಾ, 6, ನೆಹರು ಸ್ಟೇಡಿಯಂ, ಮದ್ರಾಸ್–600003 | 28 | ರೆಸ್ಲಿಂಗ್ ಫೆಡರೇಷನ್ ಆಫ್ ಇಂಡಿಯಾ, ಸೌತ್ ಪ್ಲಾಜಾ, ಅಂಡರ್ ಪಿಲನ್ 3, ಐ.ಜಿ. ಸ್ಟೇಡಿಯಂ, ನವದೆಹಲಿ–110002 |
| 29 | ಆಲ್ ಇಂಡಿಯಾ ಕರಾಟೆ ಡು ಫೆಡರೇಷನ್, 9, ಸನ್‌ಪೈನ್, 156, ಎಂ. ಕಾರ್ವೆ ರಸ್ತೆ, ಬಾಂಬೆ–400020 | 30 | ಏರೋ ಕ್ಲಬ್ ಆಫ್ ಇಂಡಿಯಾ, ಸಫದರ್ ಜಂಗ್, ಏರ್‌ಪೋರ್ಟ್ ಅರವಿಂದೋ ಮಾರ್ಗ, ನವದೆಹಲಿ–110003 |
| 31 | ರೋಇಂಗ್ ಫೆಡರೇಷನ್ ಆಫ್ ಇಂಡಿಯಾ, ಸೆಕ್ರೆಟರಿಯೇಟ್, 9, ಆರ್ಕಟ್‌ಟ್ರಿಷಾಟ್, ಮಾಥಿಯಾಸ್ ಅವೆನ್ಯೂ, ಮದ್ರಾಸ್–600028 | 32 | ಟೇಕ್‌ವೋಂಡೋ ಫೆಡರೇಷನ್ ಆಫ್ ಇಂಡಿಯಾ 33:26, ಬಿಎನ್. ಗಾಯ್‌ಲೇನ್, ಲಾಲ್‌ಬಾಗ್, ಲಕ್ನೋ–2266001 |
| 33 | ಇಂಡಿಯನ್ ವೈಟ್ ಲಿಫ್ಟಿಂಗ್ ಫೆಡರೇಷನ್, 2:2, ಬಜೆಶಿಪ್‌ಪುರ ರಸ್ತೆ, ಎನೇ ಬೈಲೇನ್, ಹೌರಾ–711102 | 34 | ಯಾಚಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ, ರೂಂ.ನಂ: 33, ಡೈರೆಕ್ಟೋರೇಟ್ ಆಫ್ ನೇವಲ್ ಟ್ರೈನಿಂಗ್ ಸಿ ವಿಂಗ್, ಸೇವಾ ಭವನ, ನವದೆಹಲಿ–110001 |
| 35 | ಇಂಡಿಯನ್ ಹಾಕಿ ಫೆಡರೇಷನ್ ರೂಂ. ನಂ: 186, ನ್ಯಾಷನಲ್ ಸ್ಟೇಡಿಯಂ, ನವದೆಹಲಿ–110001 | 36 | ಆಲ್ ಇಂಡಿಯಾ ಕೇರಂ ಫೆಡರೇಷನ್, 1997, ಸೋನಾ ಬಜಾರ್, ಬಾಗೀರಥ್ ಪ್ಲೇಸ್, ಚಾಂದ್ನಿ ಚೌಕ್, ದೆಹಲಿ–110006 |
| 37 | ಆಲ್ ಇಂಡಿಯಾ ಲಾನ್ ಟೆನ್ನಿಸ್ ಅಸೋಸಿಯೇಷನ್, ಬಿ–3:7, ಅಸಫ್ ಅಲಿ ರಸ್ತೆ, ನವದೆಹಲಿ–110002 | 38 | ಅಮೆಚೂರ್ ಅಥ್ಲೆಟಿಕ್ ಫೆಡರೇಷನ್ ಆಫ್ ಇಂಡಿಯಾ, ರೂಂ ನಂ 1148–ಎ ಗೇಟ್ ನಂ – 28, ಜವಾಹರಲಾಲ್ ನೆಹರು ಸ್ಟೇಡಿಯಂ, ನವದೆಹಲಿ |
| 39 | ಆಟ್ಯ–ಪಾಟ್ಯ ಫೆಡರೇಷನ್ ಆಫ್ ಇಂಡಿಯಾ, ನಾಗಪುರ್ ಶಾರೀರಿಕ್ ಶಿಕ್ಷಣ್ ಮಹಾವಿದ್ಯಾಲಯ, ಡಾ. ಮೂನಾ ಮಾರ್ಗ, ಧಾಂತೋಲಿ, ನಾಗಪುರ–12 | 40 | ಬಿಲಿಯರ್ಡ್ಸ್ ಅಂಡ್ ಸ್ನೂಕರ್ ಫೆಡರೇಷನ್ ಆಫ್ ಇಂಡಿಯಾ, ಕೇರಾಫ್ ದಿ ಬೆಂಗಾಲ್ ಬಾಂಡೆಡ್ ವೇರ್‌ಹೌಸ್ ಅಸೋಸಿಯೇಷನ್, 25, ನೇತಾಜಿ ಸುಭಾಷ್ ರಸ್ತೆ, ಕಲ್ಕತ್ತ–700001 |
| 41 | ಸೈಕಲ್ ಪೋಲೋ ಫೆಡರೇಷನ್ ಆಫ್ ಇಂಡಿಯಾ, ಡೂನ್ ಡ್ಲೋಡ್ ಹೌಸ್, ಹವಾ ಸಾರಕ್, ಸಿವಿಲ್ ಲೈನ್ಸ್ ಜೈಪುರ–302006 | 42 | ಇಂಡಿಯನ್ ಅಮೆಚೂರ್ ಬಾಕ್ಸಿಂಗ್ ಫೆಡರೇಷನ್, 158–ಎ, ಗೇಟ್ ನಂ–28, ಜವಾಹರಲಾಲ್ ನೆಹರು ಸ್ಟೇಡಿಯಂ, ನವದೆಹಲಿ–110003 |
| 43 | ಇಂಡಿಯನ್ ಪವರ್ ಲಿಫ್ಟಿಂಗ್ ಫೆಡರೇಷನ್, 98, ನ್ಯೂ ರಾಣಿ ಕುದರ್, ಜೇಮ್‌ಶೆಡ್‌ಪುರ – 831005 | 44 | ಅಮೆಚೂರ್ ಹ್ಯಾಂಡ್‌ಬಾಲ್ ಫೆಡರೇಷನ್ ಆಫ್ ಇಂಡಿಯಾ, 27, ಪರೇಡ್ ಗ್ರೌಂಡ್, ಜಮ್ಮು ತಾವಿ–180001 |
| 45 | ಬ್ಯಾಡ್‌ಮಿಂಟನ್ ಅಸೋಸಿಯೇಷನ್ ಆಫ್ ಇಂಡಿಯಾ, ಕೇರಾಫ್ ಜಾಕ್‌ಸನ್ ಹೋಟೆಲ್, ಸಿವಿಲ್ ಲೈನ್, ಜಬಲ್‌ಪುರ (ಎಂ.ಪಿ) – 482001 | 46 | ಬೋರ್ಡ್ ಆಫ್ ಕಂಟ್ರೋಲ್ ಫಾರ್ ಕ್ರಿಕೆಟ್ ಇನ್ ಇಂಡಿಯಾ, ಕ್ರಿಕೆಟ್ ಅಸೋಸಿಯೇಷನ್ ಆಫ್ ಬೆಂಗಾಲ್, ಡಾ. ಬಿ.ಸಿ. ರಾಯ್ ಕ್ಲಬ್ ಹೌಸ್, ಈಡನ್ ಗಾರ್ಡನ್ಸ್, ಕಲ್ಕತ್ತ–700021 |
| 47 | ಈಕ್ವೇಸ್ಟ್ರಿಯನ್ ಫೆಡರೇಷನ್ ಆಫ್ ಇಂಡಿಯಾ, 764–ಬಿ, ಗೇಟ್ 29, ಜವಾಹರಲಾಲ್ ನೆಹರು ಸ್ಟೇಡಿಯಂ, ನವದೆಹಲಿ–110003 | 48 | ಇಂಡಿಯನ್ ಬಾಡಿ ಬಿಲ್ಡಿಂಗ್ ಫೆಡರೇಷನ್, 5, ರತ್ನಾ ನಗರ, ತೇಯ್ನಾಪೇಟ್ ಮದ್ರಾಸ್–600018 |
| 49 | ಇಂಡಿಯನ್ ಸ್ಟೈಲ್ ರೆಸ್ಲಿಂಗ್ ಫೆಡರೇಷನ್ ಆಫ್ ಇಂಡಿಯಾ, ಎನ್.ಐ.ಎಸ್. ರೆಸ್ಲಿಂಗ್ | 50 | ಇಂಡಿಯನ್ ಕಯಾಕಿಂಗ್ ಅಂಡ್ ಕೆನೋಯಿಂಗ್ ಅಸೋಸಿಯೇಷನ್, 606, |

| | | | |
|---|---|---|---|
| | ಕೋಚ್, ಹೌಸ್ ನಂ: 1335, ಸೆಕ್ಟರ್ –17, ಡೆಫೆನ್ಸ್ ಕಾಲೋನಿ, ಗುರ್‌ಗಾಂವ್ (ಹರ್‍ಯಾಣ) | | ಆಕಾಶ್ ದೀಪ, 6ನೇ ಫ್ಲೋರ್, ಬಾರಕಾಂಬ ರಸ್ತೆ, ಕನ್ನಾಟ್ ಪ್ಲೇಸ್, ನವದೆಹಲಿ – 110001 |
| 51 | ರೋಲರ್ ಸ್ಕೇಟಿಂಗ್ ಫೆಡರೇಷನ್ ಆಫ್ ಇಂಡಿಯಾ, 14:2, ಕ್ಲೈವ್ ರಸ್ತೆ, ಕಲ್ಕತ್ತ–700001 | 52 | ಶೂಟಿಂಗ್ ಬಾಲ್ ಎಸ್–28, ಗ್ರೀನ್ ಪಾರ್ಕ್ ಎಕ್ಸ್‌ಟೆನ್ಷನ್, ನವದೆಹಲಿ |
| 53 | ಅಮೆಚೂರ್ ಬೇಸ್‌ಬಾಲ್ ಫೆಡರೇಷನ್ ಆಫ್ ಇಂಡಿಯಾ, 112:14, ಓಂಕಾರ್ ನಗರ 8, ಟ್ರಿ ನಗರ, ದೆಹಲಿ–110035 | | |